<u>ದಿನಾಂಕಃ 03-01-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ</u>

**<u>ಪಾಟೀ ಸವಾಲು 3ನೇ ಪ್ರತಿವಾದಿಯ ಪರ ವಕೀಲರಿಂದ ಃ</u>**

ನನ್ನ ತಾಯಿಯ ತಂದೆಯ ಹೆಸರು ಮುನಿಶಾಮಪ್ಪ . ಮುನಿಶಾಮಪ್ಪನ ಅಣ್ಣನ ಹೆಸರು ಪೂಜಪ್ಪ. ಪೂಜಪ್ಪ ಮತ್ತು ಮುನಿಶಾಮಪ್ಪನ ತಂದೆಯ ಹೆಸರು ದೊಡ್ಡ ಗುರಪ್ಪ. ಪೂಜಪ್ಪನಿಗೆ 4 ಜನ ಮಕ್ಕಳು- ಅವರೆಂದರೆ ನಾರಾಯಣಪ್ಪ , ಕೃಷ್ಣಪ್ಪ , ಮುನಿಯಮ್ಮ ಮತ್ತು ಮುನಿವೆಂಕಟಮ್ಮ. ಮುನಿ ಶಾಮಪ್ಪನಿಗೆ 4 ಜನ ಮಕ್ಕಳು ಅವರೆಂದರೆ- ಮುನಿವೆಂಕಟಮ್ಮ, ಮುನಿಯಮ್ಮ , ರತ್ನಮ್ಮ ಮತ್ತು ಜಯಮ್ಮ. ಮುನಿಶಾಮಪ್ಪ ಮತ್ತು ಪೂಜಪ್ಪನಿಗೆ ಪಿತ್ರಾರ್ಜಿತವಾಗಿ ದಾವಾ ಸ್ವತ್ತುಗಳು ಬಂದಿದೆ. ಮುನಿಶಾಮಪ್ಪ ಮತ್ತು ಪೂಜಪ್ಪ ಪೂರ್ವಿಕರಿಂದ ಬಂದ ದಾವಾ ಸ್ವತ್ತಿನಲ್ಲಿ ತಮ್ಮ ಜೀವಿತ ಕಾಲದಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಪೂಜಪ್ಪ ಮತ್ತು ಮುನಿಶಾಮಪ್ಪ ಇಲ್ಲಿಯವರೆಗೂ ವಿಬಾಗ ಆಗಿಲ್ಲ ಎಂದರೆ ಹೌದು. ಮುನಿಶಾಮಪ್ಪ ಮತ್ತು ಪೂಜಪ್ಪ ಮೃತಪಟ್ಟ ನಂತರ ಅವರರವರ ಮಕ್ಕಳುಗಳು ಅವರಿಗೆ ಬಂದಂತಹ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ, ವಿಬಾಗ ಆಗಿಲ್ಲ ಎಂದರೆ ಸರಿ. ಮುನಿಶಾಮಪ್ಪನ ಮಕ್ಕಳಿಗೆ ಮತ್ತು ಪೂಜಪ್ಪನ ಮಕ್ಕಳಿಗೆ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಪೂಜಪ್ಪ ಮತ್ತು ಮುನಿಶಾಮಪ್ಪರವರು ಪಿತ್ರಾರ್ಜಿತವಾಗಿ ಬಂದ ಆದಾಯ ಮತ್ತು ಕೂಲಿ ಕೆಲಸದಿಂದ ಬಂದ ಆದಾಯದಿಂದ ನಾರಾಯಣಪ್ಪ ಮತ್ತು ಕಿಟ್ಟಪ್ಪನ ಹೆಸರಿಗೆ ಕ್ರಯ ಪಡೆದಿದ್ದಾರೆ ಎಂದರೆ ಹೌದು. ಪೂಜಪ್ಪ ಬದುಕಿದ್ದಾಗ ಆತನೇ ಯಜಮಾನಿಕೆ ಮಾಡುತ್ತಿದ್ದ ಎಂದರೆ ಸರಿ. ಅವರ ಮರಣ ನಂತರ ಅವರ ಮಗ ನಾರಾಯಣಪ್ಪ ಮನೆಯ ಯಜಮಾನಿಕೆ ವಹಿಸಿಕೊಂಡಿದ್ದಾರೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಪೂಜಪ್ಪ ಮತ್ತು ಮುನಿಶಾಮಪ್ಪನ ಮಕ್ಕಳಿಗೆ ಎಲ್ಲಾ ಹಕ್ಕು ಇದೆ ಎಂದರೆ ಹೌದು.

**<u>ಮರು ವಿಚಾರಣೆ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.